www.ecourtsindia.com

# 5 ನೇ ಅಪರ ಸಿವಿಲ್ ನ್ಯಾಯಾದೀಶರು ಮತ್ತು ಪ್ರ.ದ.ನ್ಯಾದಂ. ನ್ಯಾಯಲಯ, ಬಳ್ಳಾರಿ

**ಸಿ.ಸಿ. 1653/2023**

**ಫಿರ್ಯಾದಿಃ** ಗಣಪಾಳ್ ಪ್ರತಾಪ್ ರೆಡ್ಡಿ ತಂದೆ ಗಣಪಾಳ್ ಚಂದ್ರಶೇಖರ್ ರೆಡ್ಡಿ ವಯಸ್ಸು 40 ವರ್ಷ, ವಾಸ : ದ್ಯಾವಮ್ಮ ದೇವಸ್ಥಾನದ ಹತ್ತಿರ, ದಮ್ಮೂರು ಗ್ರಾಮ, ಕುರುಗೋಡು ತಾಲ್ಲೂಕು, ಬಳ್ಳಾರಿ ಜಿಲ್ಲೆ.

**-ವಿರುದ್ಧ-**

**ಆರೋಪಿಃ** ಜಿ.ವೆಂಕಟೇಶ್ವರ ರಾವ್ ತಂದೆ ಜಿ.ಸುಬ್ಬಾ ರಾವ್, ವಯಸ್ಸು 55 ವರ್ಷ, ಫೇರ್ಟಿಲೈಜರ್ಸ್ ವ್ಯಾಪಾರಿ, ವಾಸ : ವಿ.ಟಿ. ಕ್ಯಾಂಪ್, ದಮ್ಮೂರು ಪೋಷ್ಟ್, ಕುರುಗೋಡು ತಾಲ್ಲೂಕು, ಬಳ್ಳಾರಿ ಜಿಲ್ಲೆ.

## ದಂ.ಪ್ರ.ಸಂ. ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ

1.ಪ್ರಶ್ನೆಃ ಈ ಪ್ರಕರಣದಲ್ಲಿ ಅಭಿಯೋಗದ ಪರ ಸಾಕ್ಷಿದಾರರು ನೀಡಿದ ಸಾಕ್ಷ್ಯವನ್ನು ಕೇಳಿದ್ದೀರ ?

ಉತ್ತರ :

2.ಪ್ರಶ್ನೆಃ ಫ್ರಾ.ಸಾ.-1 ಗಣಪಾಳ್ ಪ್ರತಾಪ್ ರೆಡ್ಡಿ ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಫಿರ್ಯಾದಿದಾರರಿಂದ ಏಪ್ರಿಲ್, 2023 ರಲ್ಲಿ 3,50,000/- ರೂ.ಗಳ ಹಣವನ್ನು ನಿಮ್ಮ ಅವಶ್ಯಕತೆಗಾಗಿ ಸಾಲವಾಗಿ ಪಡೆದುಕೊಂಡಿರುತ್ತೀರಿ, ಸದರಿ ಹಣದ ಮರುಪಾವತಿಗಾಗಿ ಪ್ರಗತಿ ಗ್ರಾಮೀಣ ಬ್ಯಾಂಕ್, ಕೊಳೂರು ಬ್ರ್ಯಾಂಚ್‌ನ ಒಂದು ಖಾಲಿ ಚೆಕ್‌ನ್ನು ನೀಡಿದ್ದು, ಸದರಿ ಚೆಕ್‌ನಲ್ಲಿ 3,50,000/- ರೂ.ಗಳ ಚೆಕ್ ನಂ.000732 ದಿನಾಂಕ 19.07.2023 ನೇದ್ದರ ಚೆಕ್ ನ್ನು ನೀಡಿದ್ದೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನಿವೇನು ಹೇಳುತ್ತೀರಿ ?

ಉತ್ತರಃ

3.ಪ್ರಶ್ನೆಃ ಫ್ರಾ.ಸಾ.-1 ಇವರು ಮುಂದುವರೆದು ಆರೋಪಿಯಾದ ನೀವು ಕೊಟ್ಟಂತಹ ಸದ್ರಿ ಚೆಕ್‌ನ್ನು ಪಿರ್ಯಾದಿಯು ಸದ್ರಿ ಚೆಕ್‌ನ್ನು ಕರ್ನಾಟಕ ಗ್ರಾಮೀಣ ಬ್ಯಾಂಕ್, ಕೊಳೂರು ಬ್ರ್ಯಾಂಚ್, ಕುರುಗೋಡು ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರಲ್ಲಿ ನಗದೀಕರಣ ಕುರಿತು ದಿಃ 19.07.2023 ರಂದು ಸಲ್ಲಿಸಿದಾಗ, ನೀವು ನೀಡಿದ ಚೆಕ್ FUNDS INSUFFICIENT ಎಂಬುವ ಹಿಂಬರಹದೊಂದಿಗೆ ದಿನಾಂಕ 04.08.2023 ರಂದು ಅಮಾನ್ಯಗೊಂಡಿರುತ್ತದೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಈ ಬಗ್ಗೆ ನಿವೇನು ಹೇಳುತ್ತೀರಿ ?

ಉತ್ತರಃ

This is a True Copy of the Court Records Online. Authenticated @ districts.ecourtsindia.com/cnr/KABI030035262023/truecopy/order-2.pdf

4. ಫ್ರಾ.ಸಾ.1 ಮುಂದುವರೆದು, ಫಿರ್ಯಾದುದಾರು ನಿಮಗೆ ಕಾನೂನಿನ ಮೇರೆಗೆ ನೋಟಿಸು ಕಳುಹಿಸಿದರು ಸಹ ನೀವು ಅವರಿಗೆ ಸಾಲವನ್ನು ಮರುಪಾವತಿಸಿರುವುದಿಲ್ಲ ಎಂದು ಸಾಕ್ಷಿಯು ಸಾಕ್ಷ್ಯವನ್ನು ನುಡಿದಿರುತ್ತಾರೆ. ಅದಕ್ಕೆ ನಿವೇನು ಹೇಳುತ್ತೀರಿ ?

ಉತ್ತರಃ

5. ಫ್ರಾ.ಸಾ.1 ಮುಂದುವರೆದು, ಆರೋಪಿಯಾದ ನೀನು ಕೊಟ್ಟ ಚೆಕ್ಕನ್ನು ನಿಪಿ 1 ರಂತೆ ಗುರುತಿಸಿದ್ದು, ಆರೋಪಿಯಾದ ನಿಮ್ಮ ಸಹಿಯನ್ನು ನಿಪಿ 1(ಎ) ಎಂದು, ಬ್ಯಾಂಕ್‌ನವರು ನೀಡಿದ ಹಿಂಬರಹವನ್ನು ನಿಪಿ 2 ರಂತೆ ಗುರುತಿಸಿದ್ದು, ಆರೋಪಿಯಾದ ನಿಮಗೆ ವಕೀಲರ ಮುಖಾಂತರ ಕಳುಹಿಸಿದ ನೋಟಿಸ್‌ನ್ನು ನಿಪಿ 3 ರಂತೆ ಗುರುತಿಸಿರುವುದಾಗಿ ಹಾಗೂ ಅಂಚೆಯ ರಸೀದಿಯನ್ನು ನಿಪಿ 4 ರಂತೆ ಗುರುತಿಸಿದ್ದು, ಅಂಚೆ ಸ್ವೀಕೃತಿ ಪತ್ರವನ್ನು ನಿಪಿ 5 ಎಂದು ಗುರುತಿಸಿರುವುದಾಗಿ ಪಿರ್ಯಾದಿದಾರರು ಸಾಕ್ಷ್ಯವನ್ನು ನುಡಿದಿರುತ್ತಾರೆ. ಅದಕ್ಕೆ ನಿವೇನು ಹೇಳುತ್ತೀರಿ ?

ಉತ್ತರ :

6.ಪ್ರಶ್ನೆಃ ಈ ಪ್ರಕರಣದಲ್ಲಿ ಏನಾದರೂ ಹೇಳಿಕ ನೀಡುವುದಿದೆಯೇ?

ಉತ್ತರಃ

7.ಪ್ರಶ್ನೆಃ ಈ ಪ್ರಕರಣದಲ್ಲಿ ನಿನ್ನ ರಕ್ಷಣೆಗೆ ಸಾಕ್ಷಿಗಳನ್ನು ವಿಚಾರಣೆ ಮಾಡಿಸುತ್ತೀಯಾ?

ಉತ್ತರಃ

( ಮೇಲಿನ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದ್ರಿ ಆರೋಪಿಯಿಂದ ಪಡೆದಿದ್ದು ಅದು ಸತ್ಯಾಂಶವನ್ನು ಹೊಂದಿದೆಯಂದು ಪ್ರಮಾಣೀಕರಿಸಲಾಗಿದೆ)

**ದಿನಾಂಕಃ 27.02.2024** **5 ನೇ ಅ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.,**
**ಬಳ್ಳಾರಿ.**

This is a True Copy of the Court Records Online. Authenticated @ districts.ecourtsindia.com/cnr/KABI030035262023/truecopy/order-2.pdf

www.ecourtsindia.com